doc-513
T.P-2

Reg No M 1299 - 42nd Year - Sri 'Satyavadi' Mysore - 15-1-1958

ಎಲ್ಲ ವಿಧದ ಅಯರ್ವೇದ ಔಷಧಗಳಿಗೆ
ಆ ಶೋ ಕ ಫಾರ್ಮಸಿ
ಲ್ಯಾನ್ಸ್‌ಡೌನ್ ಬಜಾರ್, ಮೈಸೂರು

For Quality Printing
L. N. Press
Sivarampet, Mysore

ಸತ್ಯವಾದಿ

ಸ್ಥಾಪಕರು— ಅಂದಾನೆ ಸಿದ್ಧೇಶ್ವರಾರ್ಯ ಎಂ. ಎ ಸುಬ್ಬರಾಯುಡು [ಬಿಡಿಪ್ರತಿ 3 ಪೈ

ಪ್ರಮುಖ ವರ್ತಮಾನಗಳಿಗೆ
ಆಕರ್ಷಣೀಯ ಲೇಖನಗಳಿಗೆ
" ಸತ್ಯವಾದಿ " ಪತ್ರಿಕೆಯನ್ನು
ತಪ್ಪದೇ ಓದಿ
ದಿನಪತ್ರಿಕೆ ತಿಂಗಳಿಗೆ 6 ಆಣೆ
ಸತ್ಯವಾದಿ ವಾರಾಂತ್ಯ ಪತ್ರಿಕೆ
ವಾರ್ಷಿಕಚಂದಾ ಅಂಚೆವೆಚ್ಚ ಸೇರಿ 1-80

ಪಂ. ನೆಹರುರೊಡನೆ ಶ್ರೀ ಷೇಕ್ ಅಬ್ದುಲ್ಲಾ ಸಂದರ್ಶನ

ಕಾಶ್ಮೀರದ ಮಾಜಿ ಪ್ರಧಾನಿ ಶ್ರೀ ಷೇಕ್ ಅಬ್ದುಲ್ಲಾರವರು ಸ್ವಲ್ಪ ಕಾಲವಾದ ಸಂತರ ಪ್ರಧಾನಿ ಪಂ|| ನೆಹರು ರೊಡನೆ ಭೇಟಿ ಮಾಡುವರೆಂದು ಜಮ್ಮು ವಿನಿಂದ ಬಂದ ವಾರ್ತೆಯೊಂದು ತಿಳಿಸುತ್ತದೆ.

ಕಾಂಗ್ರೆಸ್ ಶಿಫಾರ್ಸು ಮಾಡಲಿದೆ

ಹಿಂದಿಯನ್ನು ಭಾರತಾದ್ಯಂತ ಏಕ ಮಾತ್ರ ಅಧಿಕೃತ ಭಾಷೆಯಾಗಿ 1965 ರಿಂದ ಮಾಡಬೇಕೆಂದಿರುವ ನಿರ್ಧಾರಕ್ಕೆ ಅಂಟಿಕೊಳ್ಳಬಾರದೆಂದು ಗೌಹತಿಯ ಪಾರ್ಲಿಮೆಂಟರಿಪುಂಡಲ್ಲಿ ಸೇರಿರುವ 63 ನೇ ಭಾರತ ಕಾಂಗ್ರೆಸ್ ಮಹಾ ಭಾರತ ಸರ್ಕಾರಕ್ಕೆ, ಪಾರ್ಲಿಮೆಂಟಿಗೆ ಶಿಫಾರಸು ಮಾಡಲಿದೆ ಎಂದು ತಿಳಿದುಬಂದಿದೆ.

ಷೇಕ್ ಅಬ್ದುಲ್ಲಾ ಭಾಷಣ

ಶ್ರೀನಗರಕ್ಕೆ 5 ಮೈಲಿಗಳ ದೂರದಲ್ಲಿರುವ ದರ್ಗಾ ಹಜರತ್ ಬಾಲ್ ಪವಿತ್ರ ಸ್ಥಳದಲ್ಲಿ ಸೇರಿದ್ದ ಭಾರಿ ಸಭೆಯಲ್ಲಿ ಮೊನ್ನೆ 2 ಗಂಟೆಗಳ ಕಾಲ ಷೇಕ್ ಅಬ್ದುಲ್ಲಾರವರು ಮಾಡಿದ ಭಾಷಣದಲ್ಲಿ— ತಮ್ಮನ್ನು ಬಂಧಿಸಿದ ಪಿತೂರಿಯಲ್ಲಿ ನೆಹರೂರವರು ಸೇರಿದ್ದರೆಂದೂ, ಅದಲ್ಲದೆ ಕಾಶ್ಮೀರಕ್ಕೆ ಭಾರತದ ಬಗ್ಗೆ ಪ್ರೇವ ವಾಗಲೀ, ಗೌರವವಾಗಲೀ ಇರುವುದಿಲ್ಲ ಎಂದರು ಅವರು ತಮ್ಮ ಭಾಷಣವನ್ನು ಮುಂದುವರಿಸುತ್ತಾ, ಕಾಶ್ಮೀರಗಳು ತಮ್ಮ ಭವಿಷ್ಯ ನಿರ್ಧರಿಸಿಕೊಳ್ಳಲು ಪಂ|| ನೆಹರು ಮಾಡಿದ್ದ ವಾಗ್ದಾನವನ್ನು ನೆನಪಿಗೆ ತರಬೇಕೆಂದೂ ಭಾರತ ಕಾಶ್ಮೀರದಲ್ಲಿ ಭದ್ರವಾಗಿ ಕಾಲೂರಿರುವದರಿಂದ ತನ್ನ ವಾಗ್ದಾನವನ್ನು ಲಕ್ಷಿಸುತ್ತಿಲ್ಲವೆಂದೂ ತಿಳಿಸಿದರು ತಮ್ಮ ಭಾಷಣದಲ್ಲಿ ವಧ್ಯೆ ಮಧ್ಯೆ ಕೋಪಾವೇಶದಿಂದ ಉದಾಹರಿಸುತ್ತಿದ್ದರು

ಪ್ಲಾಸ್ಟಿಕ್ ಲೆನ್ಸ್ ಉಪಯೋಗ

ಡಾ|| ಮೋದಿಯವರು ತಿರುಪತಿಯಲ್ಲಿ ನಡೆಸಿದ ಉಚಿತ ನೇತ್ರ ಚಿಕಿತ್ಸಾ ಶಿಬಿರದಲ್ಲಿ ಪ್ಲಾಸ್ಟಿಕ್ ಲೆನ್ಸ್ ಉಪಯೋಗಿಸಿದರು ಈ ಲೆನ್ಸುಗಳನ್ನು ಅವರು ಈಚಿನ ವಿದೇಶ ಪ್ರವಾಸದಲ್ಲಿ ಜರ್ಮನಿಯಿಂದ ತಂದಿರುವರು.

ಉಪಗ್ರಹದಲ್ಲಿ ಮನುಷ್ಯ ಹೋಗಿದ್ದ !

ರಷ್ಯ ವಿಜ್ಞಾನಿಗಳು ಮನುಷ್ಯನನ್ನು ಉಪಗ್ರಹದಲ್ಲಿ ಮೇಲಕ್ಕೆ ಕಳಿಸಿ ಅವನನ್ನು ಜೀವಸಹಿತ ವಾಪಸು ತಂದಿರುವರೆಂದು ಲಂಡನ್ನಿನ ಕ್ರಾನಿಕಲ್ ಪತ್ರಿಕೆ ಡೇಲಿ ಸ್ಕೆಚ್ ಪ್ರಕಟಿಸಿದೆ.

ರಷ್ಯ ಕೊಂಡ ಸೆಣಬು

ಡಿಸೆಂಬರು 31 ಕ್ಕೆ ಆಗುವ ಪಕ್ಷದಲ್ಲಿ ರಷ್ಯವು 36400 ಬೇಲು ಸೆಣಬು ಕೊಂಡು. ಕೊಂಡವಂಲ್ಲಿ ಮೊದಲನೆಯ ಸ್ಥಾನ ಪಡೆದಿದೆ ಎಂದು ಡಾಕ್ಕಾ ವಂದಿ

ಭೂಗರ್ಭ ಶೋಧನೆ

ಪುಣೆಯಿಂದ ಬಂದಿರುವ ವಂದಿ ಪ್ರಕಾರ ಮಧ್ಯ ಪ್ರದೇಶದ ನವಡಾಟೋಲಿಯಲ್ಲಿ ಭೂಗರ್ಭ ಶೋಧನೆ ಮಾಡಲಾಗುತ್ತಿದೆ. 3 ಸಹಸ್ರ ವರ್ಷಗಳ ಹಿಂದೆ ಮಧ್ಯ ಭಾರತ ಮತ್ತು ಇರಾನಿಗಿದ್ದ ಸಂಪರ್ಕಗಳನ್ನು ಸೂಚಿಸುವ ಅನೇಕ ಪದಾರ್ಥಗಳು ಸಿಕ್ಕಿವೆ.

ಪ್ರಪಂಚದಲ್ಲಿದೆಯೆಂದು ಹೇಳಲಾದ 7 ಕೋಟಿ ವಿವಿಧ ಅಕ್ಕಿ ಪೈಕಿ ಭಾರತದಲ್ಲಿ 4 ಸಹಸ್ರ ವಿಧದ ಅಕ್ಕಿ ಬೆಳೆಯುಲಾಗುತ್ತಿದೆ ಎಂದು ಪ್ರಕಟವಾಗಿದೆ

ಕಂಬಳಿ ಹುಳು ನಾಶ ಕಾರ್ಯ

ಸರ್ಕಾರಿ ವಿಜ್ಞಾನಿಗಳು, ರೈತರು ವಿಮಾನ ನಡೆಸುವವರು ಎಲ್ಲರೂ ಸೇರಿ ಸಹಸ್ರ ಎಕರೆ ಭೂಮಿಯಲ್ಲಿಯ ಹುಲ್ಲುಗಾವಲುಗಳನ್ನು ಹಾಳು ಮಾಡುತ್ತಿರುವ, ರೈಲುಗಳು ಪರಿಯುದಂತೆ ಅಡ್ಡಿಪಡಿಸುತ್ತಿರುವ ಲಕ್ಷಗಟ್ಟಲೆ ಕಂಬಳಿ ಹುಳುಗಳ ಮೇಲೆ ಕಾರ್ಯಾಚರಣೆ ನಡೆಸುತ್ತಿರುವರು 20 ವಿಮಾನಗಳು ಡಿಡಿಟಿ ಎರಚಿದವು ವಸೆಗಳಲ್ಲಿ ಪಾತ್ರೆಪದಾರ್ಥಗಳಲ್ಲಿ ಎಲ್ಲೆಲ್ಲೂ ಅವು ಹರಡಿವೆ

ಭೂ ಸುತ್ತಾಟ ನಿಲ್ಲುವುದು

ಭೂವಿಯು ತನ್ನ ಅಕ್ಷ ರೇಖೆಯ ಮೇಲೆ ತಿರುಗುತ್ತಿರುವುದರ ವೇಗ ಕಡಿಮೆಯಾಗುತ್ತಿರುವುದೆಂದು ಬ್ರಿಟೀಷು ನಿಪುಣರು ತಿಳಿಸಿರುವರು ಕ್ರಾ|| 12 ರಿಂದ 16078000000 ವರ್ಷಗಳಲ್ಲಿ ಈ ಸುತ್ತು ಏಕೆ ವೂರ್ತಾ ನಿಂತುಹೋಗುವುದೆಂದು ಡಾ|| ಲೂಯಿ ಇರ್ಸರ ಅಭಿಪ್ರಾಯ ಅನಂತರ ಭೂವಿಯು ಒಂದು ಕಡೆ ಸದಾ ಸೂರ್ಯನ ಬೆಳಕು ಮತ್ತೊಂದು ಕಡೆ ಸದಾ ಕತ್ತಲು ಆಗಿರುವದಾಗಿ ಅಭಿಪ್ರಾಯಪಟ್ಟಿರುವರು ಎಡೂವರೆ ವರ್ಷ ಕಾಲದ ಶೋಧನೆಯಿಂದ ಈ ಲೆಕ್ಕಾಚಾರಕ್ಕೆ ಬಂದಿದ್ದಾರೆ ಪ್ರಪಂಚದಲ್ಲಿರುವ ಎರಡು ಅಣು ಗಡಿಯಾರಗಳ ಪೈಕಿ ಒಂದು ಅವರಲ್ಲಿದೆ ಮತ್ತೊಂದು ಅಮೇರಿಕದಲ್ಲಿದ್ದು ಅದು ನಡೆಯುತ್ತಿಲ್ಲ

ಸೂಕ್ತ ಕ್ರಮ ಅಗತ್ಯ

ಡ್ರಗ್ ಮತ್ತು ಮ್ಯಾಜಿಕ್ ರೆಮಿಡೀಸ್ ಕಾನೂನು ಏಪ್ರಿಲು 1 ರಿಂದ ಜಾರಿಗೆ ಬಂದಿದ್ದರೂ ಭಾರತ ಭಾಷಾ ಪತ್ರಿಕೆಗಳಲ್ಲಿ ಇನ್ನೂ ನಿರ್ಬಂಧಿತ ಜಾಹಿರಾತು ಪ್ರಕಟಿಸಲಾಗುತ್ತಿದೆಯೆಂದೂ, ಈ ವಿಷಯದಲ್ಲಿ ಸೂಕ್ತ ಕಾರ್ಯಕ್ರಮ ಕೈಗೆದುಕೊಳ್ಳಬೇಕೆಂದು ಕೇಂದ್ರ ಆರೋಗ್ಯ ಮಂತ್ರಿ ಶ್ರೀ ಕರಮಕರರು ಕೇಂದ್ರ ಆರೆಸಗ್ಯ ಸಮಿತಿಯ 6 ನೇ ಸಭೆಯಲ್ಲಿ ತಿಳಿಸಿದರು

ಸಾರ್ವತ್ರಿಕ ಚುನಾವಣೆ

ಸಾರ್ವತ್ರಿಕ ಚುನಾವಣೆ ವೇಳೆಯಲ್ಲಿ ನಡೆಯುವಂತಿದೆಯೆಂದೂ ಟೋರಿಗಳು ಅದಕ್ಕೆ ಸಿದ್ಧಪಡಿಸಿಕೊಳ್ಳುತ್ತಿರುವರೆಂದೂ ಪ್ರಕಟವಾಗಿರುವದಾಗಿ ಲಂಡನ್ ಪಂದಿ

ಸುದ್ದಿಗಳು

ಫ್ರಾನ್ಸು ತನ್ನ ಸೇನೆಯಲ್ಲಿ ಶೇಕಡ 13 ಹೋತ ಮಾಡಲಿದೆ ಅಂದರೆ 3 ವಿಧದ ಸೇನೆಯಲ್ಲಿ 155000 ಮಂದಿಯನ್ನು ತೆಗೆಯುಲಾಗುವುದು.

ಂ ಂ

ಅಧ್ಯಕ್ಷ ಐಸೆಹೋವರ್ ಕಾಂಗ್ರೆಸಿಗೆ 73900 ಡಾಲರು ಅಂದಾಜಪಟ್ಟಿ ಕಳುಹಿಸಿದ್ದಾರೆ.

ಂ ಂ

ಅಮೇರಿಕಾದಿಂದ ಉದಾರ ದಾನವಾಗಿ ದೀನದಲಿತರ ಉಪಯೋಗಕ್ಕೆ ಬರುತ್ತಿರುವ ಸಂಬಂಧಾಜನ ಹಾಲಿನಪುಡಿ, ಬಿಣ್ಣ, ಔಷಧಿ, ಬಟ್ಟೆಗಳು ಕಲ್ಕತ್ತಾದ ಬಹಿರಂಗ ಮಾರುಕಟ್ಟೆಗೆ ಬರುತ್ತಿರುವದಾಗಿ ಹೇಳಲಾಗಿದೆ !

ಂ ಂ

1957 ನೇ ಡಿಸೆಂಬರು ಕಡೆಯ ಒಳಗೆ ನೂರು ಮಿಲಿಯ ಜನರಿಗೆ ಕ್ಷಯರೋಗ ಪರೀಕ್ಷೆ ನಡೆಸಲಾಯಿತೆಂದೂ 35 ಮಿಲಿಯ ಜನರಿಗೆ ಬಿ ಸಿ ಜಿ ಚುಚ್ಚಲಾಯಿತೆಂದು ಪ್ರಕಟವಾಗಿದೆ.

ಂ ಂ

ಪಾಕಿಸ್ತಾನ ಆಕ್ರಮಿಸಿರುವ ಕಾಶ್ಮೀರದಲ್ಲಿ ಪಾಕಿಸ್ತಾನ ಸೇನೆ ಮತ್ತು ರಾವಲ್ಪಿಂಡಿ ಸುತ್ತಿಂದ ಫಜ ಗಾತ್ರವಾಸಿಗಳಿಗೆ ಆದ ಘರ್ಷಣೆಯಲ್ಲಿ ಅನೇಕರು ಸತ್ತು ಕೆಲವರು ಗಾಯಗೊಂಡರು.

ನಾಳೆಯ ಪಂಚಾಂಗ

ಆ|| ಮಹಾವಿದ್ವಾನ್ ದೈವಜ್ಞ ಶಿರೋಮಣಿ
ಸಂಪತ್ಕೃಷ್ಣ ಜೋಯಿಸರಿಂದ

16 ದ್ವಾದಶಿ ಅನೂರಾಧ

ಸಕ್ಕರೆ ಉತ್ಪಾದನೆ

1957 ರ ನವೆಂಬರು 1 ರಿಂದ ಡಿಸೆಂಬರು 31 ರ ವರೆವಿಗೆ 4 93 ಲಕ್ಷ ಟನ್ ಗಳಷ್ಟು ಸಕ್ಕರೆಯನ್ನು ಉತ್ಪಾದಿಸಲಾಯಿತು ಕಳೆದ ವರ್ಷ ಇದೇ ಅವಧಿಯಲ್ಲಿ 4.51 ಲಕ್ಷ ಟನ್ನುಗಳಷ್ಟು ಸಕ್ಕರೆಯನ್ನು ಉತ್ಪಾದಿಸಲಾಗಿತ್ತು. ಒಟ್ಟಾಗಿ ಒಟ್ಟು 2 95 ಲಕ್ಷ ಟನ್ನುಗಳಷ್ಟು ಸಕ್ಕರೆಯನ್ನು ಬಿಡುಗಡೆ ಮಾಡಲಾಯಿತು. 1957 ರ ಡಿಸೆಂಬರ್ 31 ರಲ್ಲಿ ಕಾರ್ಖಾನೆಗಳಲ್ಲಿ ಒಟ್ಟು 6 27 ಲಕ್ಷ ಟನ್ನುಗಳಷ್ಟು ಸಕ್ಕರೆಯು ದಾಸ್ತಾನಿನಲ್ಲಿತ್ತು.

ಸಿಮೆಂಟು ಬಳಕೆ ನಿರ್ಬಂಧ ಸಡಲಿಕೆ

ಮೈಸೂರು ರಾಜ್ಯದಲ್ಲಿ ಸಿಮೆಂಟು ಸರಬರಾಜಿನ ಪರಿಸ್ಥಿತಿಯು ಸಮಾಧಾನಕರವಿರುವುದರಿಂದ ರಾಜ್ಯದಲ್ಲಿ ಕಾಂಪೌಂಡು ಗೋಡೆ ರಚನೆ, ಇಟ್ಟಿಗೆ ಗೋಡೆ ರಚನೆ, ಇಟ್ಟಿಗೆ ಗೋಡೆಗೆ ಮೆತ್ತನೆ ಕೆಲಸ, ತಳಹದಿ ಹಾಕುವುದು ಇತ್ಯಾದಿ ಕೆಲಸಗಳಿಗಾಗಿ ಸಿಮೆಂಟು ಉಪಯೋಗಿಸುವ ಸಂಬಂಧದಲ್ಲಿ ಇದುವರೆಗೆ ವಿಧಿಸಲಾಗಿದ್ದ ನಿರ್ಬಂಧಗಳನ್ನು ಹಿಂತೆಗೆದುಕೊಳ್ಳಲಾಗಿದೆಯೆಂದು ರಾಜ್ಯದ ನಾಗರೀಕ ಪೂರೈಕೆ ಇಲಾಖೆ ಅಧಿಕಾರಿಗಳು ತಿಳಿಸಿದ್ದಾರೆ.

ಮತದಾರರ ಪಟ್ಟಿ ಬಗ್ಗೆ ಪ್ರಕಟಣೆ

ಮೈಸೂರು ರಾಜ್ಯದ ದಕ್ಷಿಣ ಭಾಗದ ಪದವೀಧರ ಕ್ಷೇತ್ರಕ್ಕೆ ಸಂಬಂಧಪಟ್ಟಂತೆ ಮೈಸೂರು ನಗರದ ಪದವೀಧರರ ಮತದಾರರ ಪಟ್ಟಿಯನ್ನು ತಯಾರಿಸಲು ಪೌಂಸಭೆಯ ನೌಕರರುಗಳು ಇದೇ ತಾ|| 15 ರ ಒಳಗಾಗಿಯೂ ಪ್ರತಿ ಮನೆಗೂ ಭೇಟಿ ಮಾಡಲಿದ್ದಾರೆ ಮತದಾರರಾಗಿ ಸೇರಲು ಹಕ್ಕುಳ್ಳ ಪ್ರತಿಯೊಬ್ಬರ ಹೆಸರೂ ತಪ್ಪದೆ ಪಟ್ಟಿಯಲ್ಲಿ ಸೇರುವಂತೆ ಮಾಡಲು ಅವರುಗಳಿಗೆ ಸಾರ್ವಜನಿಕರು ತಮ್ಮ ಅರ್ಹತೆಯ ವಿವರಗಳನ್ನು ತಿಳಿಸಿ ಸಹಕರಿಸಬೇಕಾಗಿ ಈ ಮೂಲಕ ಪ್ರಾರ್ಥಿಸಿರುತ್ತೆ ಎಂದು ಪೌಂಸಭೆ ಕಮಿಷನರಾದ ಶ್ರೀ ಎಂ. ವಜೀರ್ ಅಹಮದ್‌ರವರು ತಿಳಿಸುತ್ತಾರೆ.

ವಾರ್ಷಿಕೋತ್ಸವ

ಮೈಸೂರು ಗೌರ್ನಮೆಂಟು ಟ್ರೇನಿಂಗು ಕಾಲೇಜಿನ ವಾರ್ಷಿಕೋತ್ಸವವು ಶಾಲಾ ಆವರಣದಲ್ಲಿ ತಾ || 16 ಗುರುವಾರ ಸಂಜೆ 4 ಗುಟಿಗೆ ಮೈಸೂರು ರಾಜ್ಯದ ಮಾನ್ಯ ವಿದ್ಯಾ ಮಂತ್ರಿಗಳಾದ ಶ್ರೀ ವಿ ವೆಂಕಟಪ್ಪನವರ ಅಧ್ಯಕ್ಷತೆಯಲ್ಲಿ ನೆರವೇರಿಸಲಾಗುತ್ತದೆ.

ವಿನೋದ

ಚುನಾವಣಾ ಉಮೇದುವಾರನೊಬ್ಬನು ಭಾಷಣ ಮಾಡುತ್ತಾ— ನಾವು ಹೆಚ್ಚು ಗೋಧಿ ಬೆಳೆಯಬೇಕು, ಮತ್ತು —

ಗುಂಪಿನವನೊಬ್ಬ— ಹೌದು, ಬಣ ಹುಲ್ಲಿನ ವಿಷಯವೇನು ?

ಉಮೇದುವಾರ— ಈಗ ನಾನು ಮಾನವ ಆಹಾರವನ್ನು ಚರ್ಚಿಸುತ್ತಿದ್ದೇನೆ ; ಆದರೆ ಇನ್ನೊಂದು ನಿಮಿಷದಲ್ಲಿ ನಿಮ್ಮ ವೈಶಿಷ್ಟ್ಯಕ್ಕೆ ಬರುತ್ತೇನೆ !

ದಿವ್ಯವಾಣಿ

ಇತರರ ಕಣ್ಣುಗಳು ನಮ್ಮನ್ನು ಹಾಳುಮಾಡುವ ಕಣ್ಣುಗಳಾಗಿವೆ; ನನ್ನನ್ನು ಬಿಟ್ಟು ಮಿಕ್ಕವರೆಲ್ಲಾ ಕುರುಡರಾಗಿದ್ದರೆ, ನನಗೆ ಉತ್ತಮ ಬಟ್ಟೆಗಳೂ, ಉತ್ತಮ ಕುರ್ಚಿ ಮೇಜು ಮುಂತಾದ ಪದಾರ್ಥಗಳೂ ಬೇಕಾಗಿರಲಿಲ್ಲ

— ಫ್ರಾಂಕ್ಲಿನ್

ವುಡ್‌ಲ್ಯಾಂಡ್ ಶಿಲ್ಪ

10—1—58 ರಿಂದ

ದೇವಾನಂದ್ — ಕಲ್ಪನಾ ಕಾರ್ತಿಕ್

ಶಶಿಕಲಾ ಪಾತ್ರವಹಿಸಿರುವ

ನೌ ದೊ ಗಾರ

Nau Do Gyara

ಅತ್ಯಮೋಘ ಹಿಂದಿ ಚಿತ್ರ

ದಿನವಹಿ 3 ಪ್ರದರ್ಶನಗಳು

ಉಮಾ ಟಾಕೀಸ್

10—1—58 ರಿಂದ

ಗುಣಸುಂದರಿ

(ತಮಿಳು)

ನಟವರ್ಗ— ಸಾವಿತ್ರಿ, ಜಮಿನಿ ಗಣೇಶ್ ಸಂಬಯಾಂ, ರಂಗರಾವ್, ಕರುಣಾನಿಧಿ

[ಪ್ರತಿದಿನ 3 ಆಟಗಳು]

ಪ್ರತಿ ಶುಕ್ರವಾರ, ಶನಿವಾರ, ಭಾನುವಾರ ಬೆಳಿಗಿನ ಪ್ರದರ್ಶನ 10—30 ಕ್ಕೆ

Protect the cow

ಗೋ ಸಂರಕ್ಷಣೆ ಮಾಡಿ

ಅಪೆರಾ— ಮೈಥವ 4 ನೇ ವಾರ

ಮಾಯಾಬಜಾರ್

ಎನ್. ಟಿ. ರಾಮರಾವ್, ಸಾವಿತ್ರಿ, ರಂಗರಾವ್, ನಾಗೇಶ್ವರರಾವ್, ಪೇಲಂಗಿ

ಅಭಿನಯಿಸಿರುವ ಮನಮೋಹಕ ಕನ್ನಡ ಚಿತ್ರ

ಪ್ರತಿ ದಿನ 3 ಆಟಗಳು

ಶಾಂತಿ ಮಾನವ ಐಸೆನ್‌ಹೋವರ್ ಅವರು ವಿಶ್ವಸಂಸ್ಥೆಯಲ್ಲಿ ತಮ್ಮ ವಿಶ್ವಾಸ ವ್ಯಕ್ತಮಾಡಿರುವರು

Edited, Printed& Published by Dharma Prachara Nirata M S Krishna Rao at the Satyavadi Press Chamrajapuram Mysore